


# ಸ್ತನ ಭಂಗ

## ಬದುಕಿನ ಕೊನೆಯಲ್ಲ; ಹೊಸ ಆರಂಭ

ಸ್ತನ ಕ್ಯಾನ್ಸರ್ ಬಂದರೆ ಭಯಭೀತರಾಗಿ ಜೀವನವೇ ಮುಗಿಯಿತು ಎಂದು ಅಂದುಕೊಳ್ಳುವ ಮಹಿಳೆಯರಿಗೆ 'ಸಂಪೂರ್ಣ ಸ್ತನ ಛೇದನ ಶಸ್ತ್ರಚಿಕಿತ್ಸೆ' ಒಂದು ವರದಾನ.

■ ಉಮಾ ಅನಂತ್

ನಲವತ್ತೊಂಬತ್ತು ವರ್ಷದ ಹೇಮಲತಾ ಅವರ ಬಲ ಸ್ತನದಲ್ಲಿ ಗಡ್ಡೆ ಇರುವುದು ವೈದ್ಯಕೀಯ ಪರೀಕ್ಷೆಗಳಿಂದ ದೃಢಪಟ್ಟಿತ್ತು. ಜೊತೆಗೆ ಈಕೆಯ ಸ್ತನದ ತೊಟ್ಟಿನಲ್ಲಿ ಬಿಳಿಯ ಸ್ರಾವವೂ ಉಂಟಾಗಿ ವಿಪರೀತ ನೋವನ್ನು ಅನುಭವಿಸುವಂತಾಗಿತ್ತು. ಬೆಂಗಳೂರಿನ ಕೋರಮಂಗಲದಲ್ಲಿರುವ ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಗೆ ತಪಾಸಣೆಗಾಗಿ ತೆರಳಿದ ಹೇಮಲತಾಗೆ ಸ್ತನ ಕ್ಯಾನ್ಸರ್ ಇರುವುದು ಖಚಿತವಾಯಿತು. ಕ್ಯಾನ್ಸರ್ ಎರಡನೆ ಹಂತ ತಲುಪಿರುವುದರಿಂದ ಈಕೆಗೆ ಸಂಪೂರ್ಣ ಸ್ತನ ಛೇದನ ಶಸ್ತ್ರಚಿಕಿತ್ಸೆ (**modified radical mastectomy**) ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಯಿತು. ಈಗ ಹೇಮಲತಾ ಚೇತರಿಸಿಕೊಂಡಿದ್ದು, ಸಹಜ ಜೀವನಕ್ಕೆ ಮರಳಿದ್ದಾರೆ.

ಸ್ತನದ ನೋವಿಗಾಗಿ ಹಲವು ಕಡೆ ಚಿಕಿತ್ಸೆ ಪಡೆದುಕೊಂಡ ಬಳಿಕ ಗುಣ ಕಾಣದೆ ಅಪೊಲೊ ಸ್ಪೆಕ್ಟ್ರಾ ಆಸ್ಪತ್ರೆಗೆ ಬಂದಾಗ ಇಲ್ಲಿನ ಉದರದರ್ಶಕ ಶಸ್ತ್ರಚಿಕಿತ್ಸಾ (ಲ್ಯಾಪ್ರೊಸ್ಕೋಪಿಕ್ ಸರ್ಜನ್) ತಜ್ಞೆ ಡಾ. ನಂದಾ ರಜನೀಶ್, ಈಕೆಯ ಸ್ತನದಲ್ಲಿನ ಅಸಹಜ ಬೆಳವಣಿಗೆ ಕುರಿತು ಅನುಮಾನ ವ್ಯಕ್ತಪಡಿಸಿದ್ದರು. ಇದು ಗಡ್ಡೆಯ ರೂಪದಲ್ಲಿರುವುದನ್ನು ಪತ್ತೆ ಹಚ್ಚಿದ್ದಲ್ಲದೆ ಅಲ್ಟ್ರಾಸೌಂಡ್, ಟ್ರೂಕಟ್ ಬಯಾಪ್ಸಿಗೂ (ಅಂಗಾಂಶ ಪರೀಕ್ಷೆ) ಸೂಚಿಸಿದರು. ಇದರ ಫಲಿತಾಂಶ ನೋಡಿದಾಗ